

ಕುರ್ಚಿ ಎಲ್ಲಾನೂ ಅತ್ಲಾಗಿಟ್ಟು ಆರಾಮಾಗಿ ಕೂತ್ಗಳಣ' ಎಂದಳು.

'ಸರಿಯಪ್ಪ. ಒಂದು ಒಳ್ಳೆ ಫಿಲ್ಟರ್ ಕಾಫಿಯಾದ್ರೂ ಕುಡಿಯಣ' ಮೇಗಲೆ ಕಾಫಿ ಬೆರೆಸುತ್ತ ಹೇಳಿದಳು. ಕಾಫಿ ಕುಡಿದು ಹರಟುತ್ತ ಕೂತರು. ಹೊರಗೆ ಕತ್ತಲು ಆವರಿಸುತ್ತಿತ್ತು. ರಾಜೋ, 'ನೀವಿಬ್ಬರೂ ಏನು ತಿಂತೀರ ಹೇಳಿ' ಎನ್ನುತ್ತಾ ಆರ್ಡರ್ ಮಾಡಿದಳು.

'ಏನೇ... ಒಳ್ಳೆ ಆಕಾಶದಲ್ಲೇ ಹಾರಾಡ್ತಾ ಇದೀಯ. ಸಿಹಿ ಸುದ್ದಿ ಏನಪ್ಪ'

'ಹೇಳ್ತೀನಿ. ಹೇಳ್ತೀನಿ. ಓವರ್ ಏ ಸಿಪ್ ಆಫ್ ಶಾಂಪೇನ್' ರಾಗವಾಗಿ ಹೇಳುತ್ತ ತನ್ನ ಬ್ಯಾಕ್‌ಪ್ಯಾಕ್ ಚೀಲದಿಂದ ಬಾಟಲಿ ತೆರೆದಳು. 'ಹಾಂ. ಆದರೆ ಇದು ಮೇಗಲೆಗೆ ಇಷ್ಟವಾಗಿರೋ ರೆಡ್ ವೈನ್' ಎಂದಳು.

ಮೇಗಲೆ ಒಳಹೋಗಿ ಗ್ಲಾಸ್ ತಂದಳು. ಒಂದಿಷ್ಟು ಕುರುಕುಲು ತಂದಿಟ್ಟಳು. ವಿನುತಾ ಫ್ರಿಜ್ಜಿನಿಂದ ಐಸ್ ಹೊರತೆಗೆದಳು.

ಗ್ಲಾಸಿಗೆ ಗ್ಲಾಸ್ ತಾಗಿಸಿ, 'ಚಿಯರ್ಸ್' ಎನ್ನುತ್ತಿದ್ದಂತೆ, 'ನಾ ಡೆಲ್ಲಿ ಎನ್‌ಎಸ್‌ಡಿಗೆ ಹೋಗ್ತಿದೀನಿ. ಅಂದ್ರೆ ಸಿಲೆಕ್ಟ್ ಆಗಿದೀನಿ' ಎಂದಳು. 'ಎನ್‌ಎಸ್‌ಡಿನಾ?' ಮೇಗಲೆಗೆ ಅದೇನೆಂದು ಥಟ್ಟನೆ ಗೊತ್ತಾಗಲಿಲ್ಲ. 'ಅದೇ ಡೆಲ್ಲಿಯಲ್ಲಿ